**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. :16 ಫ್ರಾ.ಸಾ. : 6**

ಸಾಕ್ಷಿಯ ಹೆಸರು : ವಿವೇಕಾನಂದ ರಾಮಚಂದ್ರ ಪಟಗಾರ.

ತಂದೆಯ ಹೆಸರು : ರಾಮಚಂದ್ರ ಪಟಗಾರ.

ವಯಸ್ಸು : 42 ವರ್ಷ

ಉದ್ಯೋಗ : ಆರಕ್ಷಕ ಪೇದೆ 490 ಗ್ರಾಮೀಣ ಪೊಲೀಸ ಠಾಣೆ, ಕಾರವಾರ.

ವಾಸ : ಕಾರವಾರ.

**ದಿನಾಂಕಃ 25-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು 2013 ರಿಂದ 2019 ರವರೆಗೆ ಭಟ್ಕಳದ ನಗರ ಪೊಲೀಸ ಠಾಣೆಯಲ್ಲಿ ಆರಕ್ಷಕ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಆಗ ಠಾಣೆಯಲ್ಲಿ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸರ್ಕಾರದಿಂದ ನಮ್ಮ ಠಾಣೆಗೆ ಸೋನಿ ಕಂಪನಿಯ ಡಿಜಿಟಲ್ ಕ್ಯಾಮೇರಾ ಅನ್ನು ಪೂರೈಸಿದ್ದರು. ತನಿಖಾ ಸಹಾಯಕನಾಗಿ ಹೋದಾಗ ನಾನು ಸದರಿ ಕ್ಯಾಮೇರಾ ದಿಂದ ಛಾಯಾಚಿತ್ರ ತೆಗೆಯುತ್ತಿದ್ದೆ. ದಿನಾಂಕ 02.02.2017 ರಂದು ಭಟ್ಕಳ ನಗರ ಠಾಣೆ ಗುನ್ನಾ ಸಂಖ್ಯೆ 13/2017 ರಲ್ಲಿ ದೋಸಾ-21 ರವರು ನನಗೆ ಕ್ಯಾಮೆರಾ ತೆಗೆದುಕೊಂಡು ಭಟ್ಕಳದ ಸೋನಾರ ಕೇರಿಯಲ್ಲಿರುವ ಗಣಪತಿ ಶೇಟ್ ರವರ ಹೆಸರಿಗೆ ಇರುವ ಗಾಯಾಳು ವಾಸ್ತವ್ಯ ಇರುವ ಮನೆಗೆ ತನಿಖಾಧಿಕಾರಿ ಕರೆದುಕೊಂಡು ಹೋದರು. ದೋಸಾ-21 ರವರು ಘಟನಾ ಸ್ಥಳದಲ್ಲಿ ಬೆಳಿಗ್ಗೆ 7.00 ರಿಂದ 8.00 ಗಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ತಯಾರಿಸಿದರು. ಆಗ ತನಿಖಾಧಿಕಾರಿಯವರ ನಿರ್ದೇಶನದಂತೆ ನಾನು ನನ್ನ ಕೈಬರಹದಲ್ಲಿ ಪಂಚನಾಮೆಯನ್ನು ಬರೆದೆ. ಅದಕ್ಕೆ ನಾನು ಲಿಪಿಕನಾಗಿ ರುಜು ಮಾಡಿರುತ್ತೇನೆ. ಆ ಸಮಯದಲ್ಲಿ ಸ್ಥಳದ ಕಚ್ಚಾ ನಕ್ಷೆ ತಯಾರಿಸಿದೆ. ಹಾಗೂ ಘಟನಾ ಸ್ಥಳದನ್ನು ಛಾಯಾಚಿತ್ರವನ್ನು ತೆಗೆದಿರುತ್ತೇನೆ. ನಾನು ಬರೆದ ಪಂಚನಾಮೆಯನ್ನು ಈಗ ನೋಡಿರುತ್ತೇನೆ ಅದರಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಬರೆದ ಕಚ್ಚಾ ನಕ್ಷೆಯನ್ನು ಈಗ ನೋಡಿರುತ್ತೇನೆ. ಅದನ್ನು ಈಗಾಗಲೇ ನಿಪಿ-4 ಎಂದು

ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದ ಛಾಯಾಚಿತ್ರವನ್ನು ನೋಡಿರುತ್ತೇನೆ. ಅದನ್ನು ಈಗಾಗಲೇ ನಿಪಿ-3 ಎಂದು ಗುರತಿಸಲಾಗಿದೆ.

2. ನಂತರ ಅದೇ ದಿನ ತನಿಖಾಧಿಕಾರಿ ಈ ಪ್ರಕರಣದ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣೆಗೆ ತಂದಿದ್ದರು. ಆರೋಪಿಯ ಸ್ವಖುಷಿ ಹೇಳಿಕೆಯಂತೆ ಆತನು ತೋರಿಸಿದ ಘಟನಾ ಸ್ಥಳ ಹಾಗೂ ಅವನು ಘಟನೆಯ ವೇಳೆ ಧರಿಸಿದ್ದ ಬಟ್ಟೆಯನ್ನು ತನ್ನ ಮನೆಯಲ್ಲಿ ಅಡಿಗಿಸಿದ್ದ ಸ್ಥಳವನ್ನು ಪರಿಶೀಲಿಸಿ ಬೆಳಿಗ್ಗೆ 10.15 ರಿಂದ 11.45 ರವರೆಗೆ ದೋಸಾ-21 ರವರು ಪಂಚನಾಮೆಯನ್ನು ನನ್ನ ಕಡೆಯಿಂದ ಸ್ಥಳದಲ್ಲಿ ಬರೆಸಿದರು. ಆ ಪಂಚನಾಮೆಗೆ ನಾನು ಲಿಪಿಕನಾಗಿ ಸಹಿ ಮಾಡಿರುತ್ತೇನೆ. ಈಗ ಆ ಪಂಚನಾಮೆಯನ್ನು ನೋಡಿರುತ್ತೇನೆ ಅದರಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ-8(ಎ)ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಮೇಲ್ಕಂಡ ಕ್ಯಾಮೆರಾದಿಂದ ಸ್ಥಳದಲ್ಲಿ ಛಾಯಾಚಿತ್ರ ತೆಗೆದಿರುತ್ತೇನೆ. ಈಗ ಆ ಛಾಯಾಚಿತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ನಿಪಿ-9 ರಿಂದ 11 ಎಂದು ಗುರುತಿಸಲಾಯಿತು. ನಂತರ ದಿನಾಂಕ 07.02.2017 ರಂದು ಈ ಪ್ರಕರಣದ ಗಾಯಾಳುವಿನ ಮಗ ದೋಸಾ-14 ರವರು ಗಾಯಾಳು ಘಟನೆಯ ವೇಳೆ ಧರಿಸಿದ್ದ ಸೀರೆಯನ್ನು ಠಾಣೆಗೆ ಬಂದು ಹಾಜರುಪಡಿಸಿದರು. ಅದನ್ನು ತನಿಖಾಧಿಕಾರಿ ಪಂಚರ ಸಮಕ್ಷಮ ನಿಪಿ-7 ರಂತೆ ಪಂಚನಾಮೆಯನ್ನು ಮಾಡಿ ಜಪ್ತು ಮಾಡಿದರು. ಆ ಪಂಚನಾಮೆಯನ್ನು ತನಿಖಾಧಿಕಾರಿಯವರ ನಿರ್ದೇಶನದ ಪ್ರಕಾರ ಅವರ ಉಕ್ತಲೇಖನಕ್ಕೆ ನಾನು ಬರೆದೆ ಮತ್ತು ಲಿಪಿಕನಾಗಿ ನಾನು ಸಹಿ ಮಾಡಿರುತ್ತೇನೆ. ನಿಪಿ-7 ರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ನಾನು ತೆಗೆದ ಛಾಯಾಚಿತ್ರಗಳನ್ನು ಭಟ್ಕಳದ ಪೂಜಾ ಸ್ಟುಡಿಯೋದಲ್ಲಿ ಮುದ್ರಣ ಮಾಡಿಸಿ ಸಿಡಿಗೆ ವರ್ಗಾಯಿಸಿ ತನಿಖಾಧಿಕಾರಿಗೆ ಅವುಗಳನ್ನು ನೀಡಿರುತ್ತೇನೆ. ನಾನು ಛಾಯಾಚಿತ್ರ ತೆಗೆದ ಬಗ್ಗೆ ಕಲಂ 65(ಬಿ) ಪ್ರಮಾಣ ಪತ್ರ ನೀಡಿರುತ್ತೇನೆ. ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ-12(ಎ)ಎಂದು ಗುರುತಿಸಲಾಯಿತು. ನಾನು ಹೇಳಿದ 2 ಸಿಡಿಗಳನ್ನು ಈಗ ನೋಡಿರುತ್ತೇನೆ. ಸ್ಥಳದ ಛಾಯಾಚಿತ್ರ ಇರುವ ಸಿಡಿಯನ್ನು ನಿಪಿ-3/1 ಎಂದು

ಗುರುತಿಸಲಾಯಿತು. ಆರೋಪಿ ತೋರಿಸಿದ ಗುನ್ಹಾ ಸ್ಥಳ ಹಾಗೂ ಬಟ್ಟೆ ಮುಚ್ಚಿಟ್ಟಿದ್ದ ಸ್ಥಳದ ಛಾಯಾಚಿತ್ರ ಇರುವ ಸಿಡಿಯನ್ನು ನಿಪಿ–13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎ.ಎ.ಎ ರವರಿಂದ**

3. ಕಲಂ 65 (ಬಿ) ಪ್ರಮಾಣ ಪತ್ರದಲ್ಲಿ ನಾನು ಯಾವ ಕಂಪನಿಯ ಕ್ಯಾಮೇರಾದಿಂದ ಛಾಯಾಚಿತ್ರ ತೆಗೆದಿದ್ದೇನೆ ಎಂದು ಬರೆದಿಲ್ಲ ಎಂದರೆ ಹೌದು. ಕ್ಯಾಮೆರಾ ಮಾಡೇಲ್ ಬರೆದಿಲ್ಲ ಎಂದರೆ ಹೌದು. ಪೂಜಾ ಸ್ಟುಡಿಯೋದಲ್ಲಿ ಯಾವ ಗಣಕಯಂತ್ರ ಮತ್ತು ಪ್ರಿಂಟರ್ ನ್ನು ಉಪಯೋಗಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ನೀಡಿರುವ ಪ್ರಮಾಣ ಪತ್ರ ಕಲಂ 65(ಬಿ) ಪ್ರಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಕಾಲಕ್ಕೆ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಛಾಯಾಚಿತ್ರ ತೆಗೆದಿಲ್ಲಮತ್ತು ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಕ್ಷೆ, ಪಂಚನಾಮೆ ಮತ್ತು ಛಾಯಾಚಿತ್ರ ಗಳನ್ನು ಪ್ರಕರಣಕ್ಕಾಗಿ ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ